696 (1126) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಇಲಾಖೆಯಿಂದ ಜಾರಿಗೆ ತಂದಿರುವ ಸುವರ್ಣ ಕೃಷಿ ಹೊಂಡ ಹಾಗೂ ಎತ್ತಿನ ಬಂಡಿ ವಿತರಣೆ ಯೋಜನೆಯ ಕಾರ್ಯಕ್ರಮ ಎಂದಿನಿಂದ ಪ್ರಾರಂಭಿಸಲಾಗಿದೆ , ಈ ಯೋಜನೆಯ ಲಾಭ ಪಡೆದುಕೊಳ್ಳಲು ರೈತರಿಗೆ ಇರಬೇಕಾದ ಅರ್ಹತೆಗಳೇನು ,

ಆ) ಇದುವರೆವಿಗೆ ರಾಜ್ಯದ ಯಾವ ಯಾವ ಜಿಲ್ಲೆಗಳ ಎಷ್ಟೆಷ್ಟು ಜನ ರೈತರಿಗೆ ಲಾಭ ದೊರೆತಿದೆ ,

ಇ) ಇದಕ್ಕಾಗಿ ನಿಗದಿಪಡಿಸಿದ ಹಣವೆಷ್ಟು, ಈ ಪೈಕಿ ಇಲ್ಲಿಯವರೆವಿಗೆ ವೆಚ್ಚ ಮಾಡಿರುವ ಹಣವೆಷ್ಟು , (ಜಿಲ್ಲಾವಾರು ಮಾಹಿತಿ ಒದಗಿಸುವುದು) ,

ಈ) ಈ ಎರಡು ಯೋಜನೆಗಳು ಮಂದಗತಿಯಲ್ಲಿ ಸಾಗುತ್ತಿರಲು ಕಾರಣಗಳೇನು , ಈ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸರ್ಕಾರದ ಕ್ರಮಗಳೇನು ?

ಶ್ರೀ ಬಂಡೆಪ್ಪ ಕಾಶಂಪೂರ್ (ಬಸವಕಲ್ಯಾಣ)

ಅ) ಕೃಷಿ ಇಲಾಖೆಯ ವತಿಯಿಂದ 2006–07ನೇ ಸಾಲಿನಲ್ಲಿ ರಾಜ್ಯದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಎತ್ತು ಮತ್ತು ಎತ್ತಿನಗಾಡಿಗಳನ್ನು ರಿಯಾಯಿತಿ ದರದಲ್ಲಿ ವಿತರಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದ್ದು, ಇದರ ಲಾಭ ಪಡೆಯಲು ಇರಬೇಕಾದ ಅರ್ಹತೆಯ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ

ಆ) ಈವರೆಗೆ 4159 ರೈತರು ಈ ಯೋಜನೆ ಲಾಭ ಪಡೆದಿದ್ದು, ಇದರ ಜಿಲ್ಲಾವಾರು ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ

ಇ) ಇದಕ್ಕಾಗಿ, 2000.00 ಲಕ್ಷ ರೂ ಗಳನ್ನು ನಿಗದಿಪಡಿಸಲಾಗಿದ್ದು, ಇಲ್ಲಿಯವರೆಗಿನ ವೆಚ್ಚದ ಜಿಲ್ಲಾವಾರು ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ

ಈ) ಫಲಾನುಭವಿಗಳ ಆಯ್ಕೆಯಲ್ಲಿ ಉಂಟಾದ ವಿಳಂಬದಿಂದ ಕೆಲವು ಜಿಲ್ಲೆಗಳಲ್ಲಿ ಪ್ರಗತಿಯು ಕುಂಠಿತಗೊಂಡಿದ್ದು, ಆಯ್ಕೆ ಪ್ರಕ್ರಿಯೆಯು ಈಗ ತೀವ್ರಗೊಂಡಿದೆ

ವಿಧಾನ ಸಭೆ ಪ್ರಶ್ನೆ ಸಂ 1126 ಕ್ಕೆ

ಅನುಬಂಧ-1

೧ ಸುವರ್ಣ ಎತ್ತು ಮತ್ತು ಎತ್ತಿನ ಬಂಡಿ ವಿತರಣೆ ಯೋಜನೆಯಡಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಮಾತ್ರ ಸೌಲಭ್ಯವನ್ನು ಒದಗಿಸಲಾಗುವುದು

೨ ಎತ್ತು ಅಥವಾ ಎತ್ತಿನಗಾಡಿ ಹೊಂದಿಲ್ಲದಿರುವ ಸಣ್ಣ ಮತ್ತು ಅತಿಸಣ್ಣ ರೈತರು ಮಾತ್ರ ಈ ಯೋಜನೆಯ ಪ್ರಯೋಜನ ಪಡೆಯಲು ಅರ್ಹರಾಗಿರುತ್ತಾರೆ

೩ ಕುಟುಂಬದಲ್ಲಿನ ಒಬ್ಬರು ಮಾತ್ರ ಈ ಯೋಜನೆಯ ಪ್ರಯೋಜನವನ್ನು ಪಡೆಯಲು ಅರ್ಹರಾಗಿರುತ್ತಾರೆ

೪ ಸರ್ಕಾರದ ಜಮೀನನ್ನು ಅಕ್ರಮ ಸಾಗುವಳಿ ಮಾಡುವವರು (ಸಕ್ರಮಗೊಂಡಿರುವ ಪ್ರಕರಣಗಳನ್ನು ಹೊರತುಪಡಿಸಿ) ಈ ಯೋಜನೆಗೆ ಅರ್ಹರಾಗಿರುವುದಿಲ್ಲ

೫ ಈ ಯೋಜನೆಯ ಅಡಿಯಲ್ಲಿ ಫಲಾನುಭವಿಗಳಿಗೆ. ಎತ್ತು ಅಥವಾ ಎತ್ತಿನ ಗಾಡಿ ಪೈಕಿ ಒಂದರ ಪ್ರಯೋಜನವನ್ನು ಮಾತ್ರ ಪಡೆಯಲು ಅರ್ಹರಾಗಿರುತ್ತಾರೆ

೬ ಫಲಾನುಭವಿಗಳು ೫ ಎಕರೆಗಿಂತ ಕಡಿಮೆ ಜಮೀನನ್ನು ಹೊಂದಿರತಕ್ಕದ್ದು

೭ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಶಾಸಕರು ಅಧ್ಯಕ್ಷರಾಗಿರುವ ಆಯ್ಕೆ ಸಮಿತಿಗೆ ವಹಿಸಲಾಗಿದೆ.

೮ ಅರ್ಜಿದಾರರು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳ ಮೂಲಕ ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು ಅರ್ಜಿಗಳನ್ನು ಉಚಿತವಾಗಿ ರೈತ ಸಂಪರ್ಕ ಕೇಂದ್ರಗಳು ರೈತರಿಗೆ ಒದಗಿಸತಕ್ಕದ್ದು ಅರ್ಜಿಯೊಂದಿಗೆ ಹಿಡುವಳಿ/ಖಾತಾಪತ್ರ ಲಗತ್ತಿಸುವುದು ಮತ್ತು ಬ್ಯಾಂಕುಗಳಿಂದ ಸಾಲ ಪಡೆಯಲು ಇಚ್ಛಿಸುವ ರೈತರು ಬ್ಯಾಂಕುಗಳು ನಿಗಧಿಪಡಿಸಿದ ದಾಖಲೆಗಳನ್ನು ಅರ್ಜಿಯ ಜೊತೆ ಸಲ್ಲಿಸುವುದು.

೯. ರೈತ ಸಂಪರ್ಕ ಕೇಂದ್ರದಿಂದ ಸ್ವೀಕರಿಸಿದ ಅರ್ಜಿಗಳನ್ನು ಒಂದುವಾರದೊಳಗಾಗಿ ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳಿಗೆ ಸಲ್ಲಿಸತಕ್ಕದ್ದು

೧೦. ಸದಸ್ಯ ಕಾರ್ಯದರ್ಶಿಗಳು ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗೆ ಅಗತ್ಯಾನುಸಾರ ಸಮಿತಿಯ ಮುಂದೆ ಮಂಡಿಸುತಕ್ಕದ್ದು

೧೧ ಸಮಿತಿಯು ಅಂತಿಮಗೊಳಿಸಿದ ಫಲಾನುಭವಿಗಳಿಗೆ ನಿಗಧಿತ ಸೌಲಭ್ಯಗಳನ್ನು ಒದಗಿಸಲು ರೈತರು ಆಯ್ಕೆ ಮಾಡಿದ ಅಥವಾ ಸಂಬಂಧಪಟ್ಟ ಬ್ಯಾಂಕುಗಳಿಗೆ ಸಾಲ-ಸೌಲಭ್ಯಕ್ಕಾಗಿ ಅರ್ಜಿಗಳನ್ನು ತಕ್ಷಣ ಕಳುಹಿಸತಕ್ಕದ್ದು ಮತ್ತು ಫಲಾನುಭವಿಗಳ ಪಟ್ಟಿಯನ್ನು ಕಛೇರಿಯ ನೋಟಿಸ್ ಫಲಕದಲ್ಲಿ ಪ್ರಕಟಿಸತಕ್ಕದ್ದು

೧೨ ಎತ್ತುಗಳನ್ನು ಮುಂದಿನ ಐದು ವರ್ಷಗಳ ವರೆಗೆ ಪರಭಾರೆ/ಮಾರಾಟ ಮಾಡದಿರುವ ಬಗ್ಗೆ ಫಲಾನುಭವಿಗಳಿಂದ ಮುಚ್ಚಳಿಕೆ ಪತ್ರ ಪಡೆದು ಸಂಬಂಧಪಟ್ಟ ಬಿಲ್ಲಿನೊಂದಿಗೆ ಲಗತ್ತಿಸಬೇಕು.

ಅನುಬಂಧ–2

ಎತ್ತು ಮತ್ತು ಎತ್ತಿನ ಗಾಡಿ ಯೋಜನೆ 2006-07 ಕುರಿತ ವಿವರ

ಕ್ರ ಸಂ	ಜಿಲ್ಲೆ	ನಿಗಧಿಪಡಿಸಲಾದ ಹಣ (ರೂ. ಲಕ್ಷ ಗಳಲ್ಲಿ)	ಖರ್ಚಾದ ಹಣ (ರೂ ಲಕ್ಷ ಗಳಲ್ಲಿ)	ಎತ್ತು ಮತ್ತು ಎತ್ತಿನಗಾಡಿ ಯೋಜನೆಯಡಿ ಅನುಕೂಲ ಪಡೆದ ರೈತರ ಸಂಖ್ಯೆ
1	ಬಂಗಳೂರು (ನ)	26 80	05 68	71
2	ಬಂಗಳೂರು (ಗ್ರಾ)	99 40	35 28	441
3	ಕೋಲಾರ	126 60	12 80	160
4	ತುಮಕೂರು	120 40	05 52	69
5	ಶಿವಮೊಗ್ಗ	58 80	20 72	259
6	ಚಿತ್ರದುರ್ಗ	62 20	11 68	146
7	ದಾವಣಗೆರೆ	69 80	36 88	461
8	ಮೈಸೂರು	126.20	09 28	116
9	ಚಾಮರಾಜನಗರ	60.20	00 00	000
10	ಮಂಡ್ಯ	179 40	10 80	135
11	ಕೊಡಗು	16 60	05 60	70
12	ಹಾಸನ	149 00	19 76	247
13	ಚಿಕ್ಕಮಗಳೂರು	60 80	07 60	95
14	ದಕ್ಷಿಣ ಕನ್ನಡ	59 00	09 76	122
15	ಉಡುಪಿ	63 80	00 00	000
16	ಧಾರವಾಡ	23 60	02 08	26
17	ಗದಗ	27 80	02 24	28
18	ಹಾವೇರಿ	50.20	04 88	61
19	ಉತ್ತರಕನ್ನಡ	56 20	02 00	25
20	ಬೆಳಗಾಂ	129 40	44 64	558
21	ಬಿಜಾಪುರ	50 20	09 60	120
22	ಬಾಗಲಕೋಟೆ	44 20	10 88	136
23	ರಾಯಚೂರು	65 00	00 00	000
24	ಕೊಪ್ಪಳ	45 40	07 84	98
25	ಬಳ್ಳಾರಿ	57 00	22 80	285
26	ಗುಲ್ಬರ್ಗಾ	117 60	34 40	430
27	ಬೀದರ್	54 40	00 00	000
	ಒಟ್ಟು	2000 00	332.72	4159